C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 256/2019

**ಚಾಸಾ– 26 ಪ್ರಾ.ಸಾ– 15**

| | |
|---|---|
| **ಸಾಕ್ಷಿದಾರರ ಹೆಸರು** | **ಶಿವಕುಮಾರ್ ಕೆ.ಎನ್** |
| **ತಂದೆಯ ಹೆಸರು** | **ನಂಜುಂಡೇಗೌಡ** |
| **ವಯಸ್ಸು** | **40 ವರ್ಷಗಳು** |
| **ಉದ್ಯೋಗ** | **ಎಕ್ಸಿಕ್ಯೂಟೀವ್ ಎಂಜಿನಿಯರ್, ಚೆಸ್ಕಾಂ, ಮದ್ದೂರು** |
| **ವಾಸ** | **ಮಂಡ್ಯ** |

**ದಿನಾಂಕಃ 11.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನಾನು ಜುಲೈ 2014 ರಿಂದ ಏಪ್ರೀಲ್ 2021 ರವರಗೆ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಎಂಜಿನಿಯರ್ ಆಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಮಂಡ್ಯ ಉಪ ವಿಭಾಗ, ಮಂಡ್ಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿಃ10.09.2019 ರಂದು ಈ ಪ್ರಕರಣದ ತನಿಖಾಧಿಕಾರಿಗಳು ಗಾಂಧಿನಗರ 6ನೇ ಕ್ರಾಸ್ ನಲ್ಲಿರುವ RR No.ATL23827 ರ ಮನೆಯ ಮಾಲೀಕರು ವಿದ್ಯುತ್ ಸಂಪರ್ಕ ಹೊಂದಲು ಕೋರಿರುವ ಪತ್ರ ಹಾಗೂ ವಿದ್ಯುತ್ ಸಂಪರ್ಕ ನೀಡಿರುವ ದಾಖಲೆಗಳನ್ನು ದೃಡೀಕರಿಸಿ ನೀಡುವಂತೆ ಕೋರಿಕೆಯನ್ನು ಸಲ್ಲಿಸಿದ್ದರು. ಸದರಿ ಕೋರಿಕೆ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–33** ಎಂದು ಗುರುತಿಸಲಾಗಿದೆ. ಅದರಂತೆ ಕಛೇರಿಯಲ್ಲಿ ಇದ್ದ ಮೂಲಕ ಕಡತವನ್ನು ಪರಿಶೀಲಿಸಿ ದಿಃ10.10.2019 ರಂದು RR No.ATL23827 ಗೆ ಸಂಬಂದಪಟ್ಟ ಕಛೇರಿಯ ಕಾರ್ಯಾದೇಶದ ದೃಡೀಕೃತ ಪ್ರತಿ, ಅನಧೀಕೃತ ಸಂಪರ್ಕ ಸಕ್ರಮಗೊಳಿಸುವುದಕ್ಕೆ ಪುಟ್ಟಮಾದಯ್ಯರವರು ನೀಡಿರುವ ಸ್ವಯಂ ಮನವಿಯ ದೃಡೀಕೃತ ಪ್ರತಿ, ಸದರಿ ಪುಟ್ಟಮಾದಯ್ಯ ಇಲಾಖೆಯ ಜೊತೆ

ಮಾಡಿರುವ ನೇರ ಸಂಪರ್ಕ ಒಪ್ಪಂದ ಪತ್ರದ ದೃಡೀಕೃತ ಪ್ರತಿ, ಸೇವಾ ಪ್ರಮಾಣ ಪತ್ರ ಹಾಗೂ ಸ್ವಿಕೃತಿಯ ದೃಡೀಕೃತ ಪ್ರತಿಗಳನ್ನು ನನ್ನ ಕವಚ ಪತ್ರದೊಂದಿಗೆ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸದರಿ ದಾಖಲೆಗಳನ್ನು ಈಗ ನೋಡುತ್ತಿದ್ದು ಅನಧೀಕೃತ ಸಂಪರ್ಕ ಸಕ್ರಮಗೊಳಿಸುವುದಕ್ಕೆ ಪುಟ್ಟಮಾದಯ್ಯರವರು ನೀಡಿರುವ ಸ್ವಯಂ ಮನವಿಯ ದೃಡೀಕೃತ ಪ್ರತಿಯನ್ನು **ನಿಪಿ–34** ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–34ಎ** ಎಂದು ಗುರುತಿಸಲಾಗಿದೆ. ಸದರಿ ಪುಟ್ಟಮಾದಯ್ಯ ಇಲಾಖೆಯ ಜೊತೆ ಮಾಡಿರುವ ನೇರ ಸಂಪರ್ಕ ಒಪ್ಪಂದ ಪತ್ರದ ದೃಡೀಕೃತ ಪ್ರತಿಯನ್ನು **ನಿಪಿ–35** ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–35ಎ** ಎಂದು ಗುರುತಿಸಲಾಗಿದೆ. ಕಾರ್ಯಾದೇಶದ ದೃಡೀಕೃತ ಪ್ರತಿಯನ್ನು **ನಿಪಿ–36** ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–36ಎ** ಎಂದು ಗುರುತಿಸಲಾಗಿದೆ. ಸೇವಾ ಪ್ರಮಾಣ ಪತ್ರದ ಹಾಗೂ ಸ್ವಿಕೃತಿಯ ದೃಡೀಕೃತ ಪ್ರತಿಯನ್ನು **ನಿಪಿ–37** ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–37ಎ** ಎಂದು ಗುರುತಿಸಲಾಗಿದೆ ಹಾಗೂ ಕಛೇರಿಯ ಕವಚ ಪತ್ರವನ್ನು **ನಿಪಿ–38** ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–38ಎ** ಎಂದು ಗುರುತಿಸಲಾಗಿದೆ. ಸದರಿ ದಾಖಲೆಗಳ ಪ್ರಕಾರ ಪುಟ್ಟ ಮಾದಯ್ಯ ಬಿನ್ ಕಾಳಯ್ಯರವರಿಗೆ ವಿದ್ಯುತ್ ಸಂಪರ್ಕವನ್ನು ದಿಃ02.04.2002 ರಲ್ಲಿ ನೀಡಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ:**

1. ಸಾಮಾನ್ಯವಾಗಿ ವಿದ್ಯುತ್ ಸಂಪರ್ಕ ಕೋರಿ ಒಬ್ಬ ವ್ಯಕ್ತಿ ಅರ್ಜಿ ಸಲ್ಲಿಸಿದಾಗ ಸದರಿ ಸ್ವತಿಗೆ ಸಂಬಂದಪಟ್ಟ ಮಾಲೀಕತ್ವದ ದಾಖಲೆಯನ್ನು ಪರಿಶೀಲನೆ ಮಾಡುತ್ತೇವೆ. ಪುಟ್ಟಮಾದಯ್ಯ ಬಿನ್ ಕಾಳಯ್ಯರವರಿಗೆ ವಿದ್ಯುತ್ ಸಂಪರ್ಕ ನೀಡಿರುವ ಕಡತದಲ್ಲಿ ಅವರ ಮಾಲೀಕತ್ವದ ದಾಖಲೆಗಳು ಕಂಡುಬರುವುದಿಲ್ಲ. ನಿಪಿ–34 ಅರ್ಜಿಯಲ್ಲಿ ವಿದ್ಯುತ್ ಸಂಪರ್ಕ ಕೋರಿರುವ ಮನೆ ನಂಬರ್ ಇರುವುದಿಲ್ಲ. ಸ್ಕೀಂ ಮುಾಲಕ ವಿದ್ಯುತ್ ಸಂಪರ್ಕ ಸಕ್ರಮಗೊಳಿಸುವಾಗ ಸದರಿ ಮನೆಯ ಮಾಲೀಕರು ಅವರೇ ಎಂದು ಖಚಿತ ಪಡಿಸುವ ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ನಿಪಿ–35 ಪುಟ ಸಂಖ್ಯೆ 2 ರ indemnity bond ನಲ್ಲಿ ದಿನಾಂಕ ತಿಂಗಳು ವರ್ಷ ನಮೂದಾಗಿರುವುದಿಲ್ಲ.

ತನಿಖಾಧಿಕಾರಿಗಳು ನಿಪಿ-33 ಕೋರಿಕೆ ಪತ್ರವನ್ನು ಸಲ್ಲಿಸಿದ ನಂತರ ಸ್ಥಳ ಪರಿಶೀಲನೆ ಮಾಡಿ ಸದರಿ ಸ್ವತ್ತಿನ ಮಾಲೀಕರು ಯಾರು ಎಂದು ನಾನು ಮನವರಿಕೆ ಮಾಡಿಕೊಂಡಿರುವುದಿಲ್ಲ. ತನಿಖಾಧಿಕಾರಿಗಳು ಅವರ ಕೋರಿಕೆ ಪತ್ರದೊಂದಿಗೆ ಸ್ಥಳಕ್ಕೆ ಸಂಬದಪಟ್ಟ ಯಾವುದೇ ಮಾಲೀಕತ್ವದ ದಾಖಲೆಗಳನ್ನು ನೀಡಿರುವುದಿಲ್ಲ. ತನಿಖಾಧಿಕಾರಿಗಳು ನನಗೆ ನಿಪಿ-33 ಕೋರಿಕೆಯನ್ನು ಸಲ್ಲಿಸಿದ ನಂತರ ನಿಪಿ-34 ರಿಂದ 38 ದಾಖಲೆಗಳನ್ನು ಸುಳ್ಳಾಗಿ ಸೃಷ್ಟಿ ಮಾಡಿ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

2. RR No.ATL23827 ಚಾಲ್ತಿಯಲ್ಲಿ ಇದ್ದಬಗ್ಗೆಯಾಗಲೀ ಹಣ ಸಂದಾಯ ಮಾಡುತ್ತಿರುವ ಬಗ್ಗೆಯಾಗಲೀ ಯಾವುದೇ ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. RR No.ATL23827 ಪುಟ್ಟ ಮಾದಯ್ಯರವರಿಗೆ ಸಂಬಂದಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಕೋರಿಕೆಯ ಮೇರೆಗೆ ಪಿರ್ಯಾದಿಯ ಒತ್ತಡಕ್ಕೆ ಮಣಿದು ಸುಳ್ಳು ಸಾಕ್ಷಿಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**